**ಅಸಲು ದಾವಾ ನಂಃ127/2021**
**ಪಿ.ಡಬ್ಲ್ಯೂಃ02**

**ದಿನಾಂಕಃ 06-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಆರ್ ಎಸ್ ಎಂ ಪ್ರತಿವಾದಿ ಪರ ವಕೀಲರಿಂದ**

ದಿಃ14-06-1993 ರಂದು ನನ್ನ ತಂದೆ ತಿಪ್ಪಜ್ಜ ನನ್ನ ಮತ್ತು ನನ್ನ ಇಬ್ಬರ ಸಹೋದರಿಯರಾದ ಕರಿಯಮ್ಮ ಮತ್ತು ಮಚ್ಚಕ್ಕರವರ ಹೆಸರಿಗೆ ವಿಲ್ ನ್ನು ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಲ್ ಪ್ರಕಾರ ನನಗೂ ಮತ್ತು ನನ್ನ ಇಬ್ಬರ ಸಹೋದರಿಯರಿಗು ಆಸ್ತಿಯನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ವಿಲ್ ಪ್ರಕಾರ ನನಗೆ ಜಾಜೂರು ಗ್ರಾಮದ ರಿ.ಸರ್ವೇ ನಂ.37/1 ಪಿ ರ ಜಮೀನಿನ ತರಿ 0-30 ಗುಂಟೆ ಜಮೀನು ನನ್ನ ಹೆಸರಿಗೆ ಬಂದಿರುತ್ತದೆ ಎಂದರೆ ಸುಳ್ಳು. ಅದೇ ರೀತಿಯಾಗಿ ಜಾಜೂರು ಕಾವಲ್ ರಿ.ಸರ್ವೇ ನಂ.64/ಪಿ ರಲ್ಲಿನ 3 ಎಕರೆ ಜಮೀನು ಬಂದಿರುತ್ತದೆ ಎಂದರೆ ಸುಳ್ಳು. ಜಾಜೂರು ಮಂಡಲ ಪಂಚಾಯಿತಿಗೆ ಸೇರಿದ ಕಾಮಸಮುದ್ರ ಪಂಚಾಯಿತಿಗೆ ಖಾತೆ ನಂ.368 ಮಾಳಿಗೆ ಮನೆಯು ನನಗೆ ಸದರಿ ವಿಲ್ ಪ್ರಕಾರ ಬಂದಿರುತ್ತದೆ ಎಂದರೆ ಸರಿ.

ಅದೇ ರೀತಿ ತಿಪ್ಪಯ್ಯ ಬಿನ್ ಕಲ್ಲಪ್ಪ ಇವರ 2 ನೇ ಹೆಣ್ಣು ಮಗಳಾದ ಕರಿಯಮ್ಮ ಮತ್ತು 3 ನೇ ಮಗಳಾದ ಮಚ್ಚಕ್ಕ ಇವರಿಬ್ಬರಿಗೆ ಚಳ್ಳಕೆರೆ ತಾಲ್ಲೂಕು ಜಾಜೂರು ಗ್ರಾಮದ ರಿ.ಸ.ನಂ.137 ರಲ್ಲಿ 6 ಎಕರೆ ಜಮೀನಿನಲ್ಲಿ ತನ್ನ ಅಣ್ಣನಾದ ಕರಿಯಪ್ಪ ಯಾನೆ ಕರಿಯಜ್ಜ ಇವರೊಂದಿಗೆ ಮೌಖಿಕವಾಗಿ ಪಾಲುವಿಭಾಗ ಮಾಡಿಕೊಂಡಿದ್ದು, ಆ ಪ್ರಕಾರ ತನ್ನ ಭಾಗಕ್ಕೆ ಬಂದಿದ್ದ ಪೂರ್ವ ದಿಕ್ಕಿನ 3 ಎಕರೆ ಜಮೀನನ್ನು ವಿಲ್ ಪತ್ರದ ಮೂಲಕ ಸೇರತಕ್ಕದ್ದೆಂದು ಬರೆಸಿಟ್ಟಿರುತ್ತಾರೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸದರಿ ಕೋರಿಕೆಯನ್ನು ಅನುಮತಿಸಲಾಯಿತು ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.